

ದೆಹಲಿಯಲ್ಲಿನ ಮಿರ್ಜಾ ಗಾಲಿಬ್ ಮನೆ

ಜಹಗೀರದಾರರ ಕುಟುಂಬದಲ್ಲಿ ಜನಿಸಿದ್ದ ಗಾಲಿಬ್ ಅಪ್ಪಟ ಸ್ವಾಭಿಮಾನಿಯಾಗಿದ್ದ. ಬ್ರಿಟಿಷರು ದೆಹಲಿಯಲ್ಲೊಂದು ಕಾಲೇಜನ್ನು ತೆರೆದಿದ್ದರು. ಅಲ್ಲಿ ಅಧ್ಯಾಪಕರನ್ನು ನೇಮಿಸಿಕೊಳ್ಳಬೇಕಾದಾಗ ಸಚಿವ ಥಾಮ್ಸನ್ ಅದಾಗಲೇ ಪರಿಚಯವಿದ್ದ ಗಾಲಿಬ್‌ನಿಗೆ ಹೇಳಿಕಳುಹಿಸುತ್ತಾನೆ. ಪಲ್ಲಕ್ಕಿಯಲ್ಲಿ ಬಂದ ಗಾಲಿಬ್ ಕಚೇರಿಯ ಹೊರಗೆ ನಿಂತು ಸ್ವಾಗತಿಸಲು ಬರುವರೆಂದು ಕಾಯುತ್ತಾನೆ. ಈ ಸಂಗತಿ ಥಾಮ್ಸನ್ನನಿಗೆ ತಿಳಿದು, ‘ಆತ ಜಹಗೀರದಾರನಾಗಿ ಬಂದಿದ್ದರೆ ಸಂಪ್ರದಾಯದಂತೆ ಸ್ವಾಗತಿಸಬಹುದಿತ್ತು. ಆದರೀಗ ಆತ ಅಧ್ಯಾಪಕ ಹುದ್ದೆಗೆ ಅಭ್ಯರ್ಥಿಯಾಗಿ ಬಂದಿರುವುದರಿಂದ ಖುದ್ದಾಗಿ ಬಂದು ಸ್ವಾಗತಿಸಲು ಸಾಧ್ಯವಿಲ್ಲ’ ಎಂದು ಹೇಳಿಕಳುಹಿಸುತ್ತಾನೆ. ಸಹಾಯಕನಿಂದ ಈ ವಿಷಯ ಅರಿತುಕೊಂಡ ಗಾಲಿಬ್, ‘ಇಲ್ಲಿ ಅಧ್ಯಾಪಕ ವೃತ್ತಿ ಮಾಡುವುದರಿಂದ ನನ್ನ ಹಾಗೂ ಪರಿವಾರದ ಗೌರವ ಹೆಚ್ಚಾಗುತ್ತದೆಂದು ಬಂದೆ. ಆದರೆ ಬದಲಾಗಿ ಇಲ್ಲಿ ಇದ್ದ ಮರ್ಯಾದೆಯೂ ಹರಾಜಾಗುತ್ತಿದೆ ಎಂದ ಮೇಲೆ ಈ ಕೆಲಸ ತನಗೆ ಬೇಡ’ವೆಂದು ನಿರ್ಧರಿಸಿ ಅದೇ ಪಲ್ಲಕ್ಕಿಯಲ್ಲಿ ಮರಳಿ ಹೋದ. ಇವನ ಸ್ವಾಭಿಮಾನದ ಮುಂದೆ ಬ್ರಿಟಿಷ್ ಸರಕಾರಿ ನೌಕರಿಯೂ ಯಃಕಶ್ಚಿತವಾಗಿಬಿಟ್ಟಿತು.

ಕೇಳದಿರು ಕೆಡುಕು ನುಡಿದರೆ ಯಾರಾದರೂ
ಹೇಳದಿರು ಕೆಡಕು ಗೈದರೆ ಯಾರಾದರೂ
ತಡೆ, ತಪ್ಪು ದಾರಿ ತುಳಿದರೆ ಯಾರಾದರೂ
ಕ್ಷಮಿಸಿ ಬಿಡು ತಪ್ಪು ಮಾಡಿದರೆ ಯಾರಾದರೂ
ಅಪೇಕ್ಷೆಯೇ ಇಲ್ಲವಾದಾಗ ಗಾಲಿಬ್,
ಯಾರನೇತಕೆ ದೂರುವುದು ಯಾರಾದರೂ

ಎಂಬ ಆತ್ಮಾವಲೋಕನದ ಅಧ್ಯಾತ್ಮ ಗಾಲಿಬನದು. ಆತ ವಚನಕಾರರಂತೆಯೇ ವ್ಯಕ್ತಿ ಸಾಧನೆಯ ಸೂತ್ರಗಳನ್ನು ಕಟ್ಟಿಕೊಡುತ್ತಾನೆ.

ಗಾಲಿಬ್‌ನನ್ನು ಕೆಲವೇ ಪದಗಳಲ್ಲಿ ವ್ಯಾಖ್ಯಾನಿಸುವುದಾದರೆ – ಆತ್ಮದ ನಶೆಯೇರಿಸುವ ಕವಿತೆ, ರಸಾನುಭವಕ್ಕೊಂದಿಷ್ಟು ಗುಲಾಬು, ರಾತ್ರಿಯ ಅಮಲಿಗೊಂದಿಷ್ಟು ಶರಾಬು, ಹಸಿವಿಗೆರಡು ರೊಟ್ಟಿ. ಸ್ವಾದಕ್ಕೊಂದಿಷ್ಟು ಮಾವು. ಇವೆಲ್ಲವುಗಳ ಅದ್ಭುತ ರಸ ಸಂಯೋಜನೆಯೇ ನಾವೆಂದುಕೊಂಡ ಗಾಲಿಬ್. ಮೊಗಲ್ ಸಾಮ್ರಾಜ್ಯ ಪತನವಾಗಿ ಬ್ರಿಟಿಷ್ ಅಧಿಪತ್ಯ ಸ್ಥಾಪನೆಯಾಗುವ ವಿಷಮ ಸಂಕ್ರಮಣ ಕಾಲದಲ್ಲಿ ಚರಿತ್ರೆಯ ಸಾಕ್ಷಿಪ್ರಜ್ಞೆಯಾಗಿದ್ದವನು ಗಾಲಿಬ್. ಹಿಂಸೆ, ಕೊಲೆ, ರಕ್ತಪಾತ, ಕಾಳಗ, ಯುದ್ಧಗಳೇ ತುಂಬಿದ ಜಗತ್ತಿನಲ್ಲಿ ಆತನೇ ಹೇಳುವ ಹಾಗೆ ಹೃದಯದ ದುಃಖಗಳಿಗೆ ಮದ್ದಾಗಬಲ್ಲ ಸೋಮರಸ ಹಾಗೂ ಕವಿತೆಗಳಿಂದ ನಶೆಯೇರಿಸಿಕೊಂಡು ಬದುಕುತ್ತಲೇ ಮಹಾಸಂತನಾಗಿ ಗುರ್ತಿಸಿಕೊಂಡ. ತನ್ನದೇ ವಿಶಿಷ್ಟ ತಾತ್ವಿಕತೆ, ಚಿಂತನೆ, ಎಲ್ಲರನ್ನೊಳಗೊಂಡ ಕಾವ್ಯಗಳಿಂದ ಸಾಂಸ್ಕೃತಿಕ ಲೋಕದ ಪ್ರಖರ ಸೂರ್ಯನಾಗಿ ಇಂದಿಗೂ ಕಂಗೊಳಿಸುತ್ತಿದ್ದಾನೆ.

ಮಿರ್ ಮೆಹದಿಯು ಒಮ್ಮೆ ‘ಧರ್ಮಶಾಸ್ತ್ರವನ್ನೋದಿದರೆ ಏನಾದರೂ ಲಾಭವಾಗುತ್ತದೆಯೇ?’ ಎಂದು ಕೇಳಿದ್ದಕ್ಕೆ ಗಾಲಿಬನೆಂದ: ‘ಧರ್ಮಶಾಸ್ತ್ರ ಓದಿ ಏನು ಮಾಡುವೆ? ಚಿಕಿತ್ಸಾಶಾಸ್ತ್ರ, ಜ್ಯೋತಿಷ್ಯ, ತರ್ಕಶಾಸ್ತ್ರ, ದರ್ಶನಗಳನ್ನಾದರೂ ಓದು, ಕೊನೆಯ ಪಕ್ಷ ಮನುಷ್ಯನಾದರೂ ಆಗಬಹುದು’. ಗಾಲಿಬನ ಈ ಮಾತೊಂದೇ ಸಾಕು ವರ್ತಮಾನದ ಸಾಮಾಜಿಕ, ಧಾರ್ಮಿಕ, ರಾಜಕಾರಣದ ತಲ್ಲಣಗಳಿಗೆ ಅವನು ಹೇಗೆ ಉತ್ತರವಾಗಬಲ್ಲನೆಂಬುದಕ್ಕೆ. ಬದುಕಿನಲ್ಲಿ ಆತ ಪಡೆದ ಸುಖಕ್ಕಿಂತ ಉಂಡ ನೋವುಗಳ ಲೆಕ್ಕವೇ ಅಪರಿಮಿತ. ಗಾಯಗಳ ಮೇಲೆ ಗಾಯ, ಸಂಕಟಗಳ ಮೇಲೆ ಸಂಕಟ, ಬಾಡಿಗೆ ಮನೆಯೊಳಗೆ ಸಂಸಾರ, ಪಿಂಚಣಿಗಾಗಿ ಹೋರಾಟ, ಕೆಲವು ಬ್ರಿಟಿಷ್ ಅಧಿಕಾರಿಗಳು ಹಾಗೂ ನಂಬಿದ ನವಾಬರಿಂದ ದ್ರೋಹ ಹೀಗೆ ಬದುಕೆಲ್ಲವೂ ನಿತ್ಯಚಿಂತೆಗಳ ಸಂತೆಯಾಯಿತೇ ವಿನಃ ಆತ ಆಚರಿಸಬಹುದಾದ ಸಂಭ್ರಮದ ಹಬ್ಬವಾಗಲೇ ಇಲ್ಲ.

ಹಾಸಿಗೆಯಿಂದ ಏಳಲಾಗದ ಕೊನೆಗಾಲದಲ್ಲಿಯೂ ಮಲಗಿಕೊಂಡೇ, ಬರಹವನ್ನು ನಿಲ್ಲಿಸಲಾಗದ ತಪವನ್ನಾಚರಿಸಿದ ಫಕೀರನೆಂದರೆ ಗಾಲಿಬ್. ಧರ್ಮಕ್ಕಿಂತಲೂ ಬದುಕಿನ ತತ್ವಜ್ಞಾನವೇ ಮಿಗಿಲಾದದ್ದು ಎಂದು ನಂಬಿ ಬದುಕಿದ ಆ ಧರ್ಮಾತೀತ ಸಂತ ಕೊನೆಯುಸಿರೆಳೆದಾಗ, ಧರ್ಮಪರೀಕ್ಷೆಯನ್ನು ಎದುರಿಸಬೇಕಾಗಿ ಬಂದದ್ದು ಮಾತ್ರ ವಿಪರ್ಯಾಸವೇ ಸರಿ. ಹೀಗೆ ಬರೆಯುತ್ತಿರುವಾಗಲೇ ನನ್ನಲ್ಲಿ ಹುಟ್ಟಿದ ಸಾಲುಗಳಿವು:

ನಾನೂ ಗಾಲಿಬನ ಕವಿತೆಗಳನ್ನು ಪ್ರೀತಿಸುತ್ತೇನೆ, ಏಕೆಂದರೆ ಅಲ್ಲಿ ಶರಾಬಿನ ಅಮಲಿದೆ, ಮಾವಿನ ಮದವಿದೆ, ಪ್ರೇಮದ ನಶೆಯಿದೆ, ಅನುಭಾವದ ನದಿಯಿದೆ.

ಪ್ರತಿಕ್ರಿಯಿಸಿ: ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in